# ಶ್ರೀಮಾತೆಯವರೊಡನೆ ಮಾತುಕತೆ

### ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು



ಪಕ್ಕದ ಕೋಣೆಯಲ್ಲಿ ಕೆಲವು ಸ್ತ್ರೀಭಕ್ತರು ಕುಳಿತಿದ್ದಾರೆ. ಅವರು ಕಾಲಿಘಾಟ್‌ನ ಶಿವ ನಾರಾಯಣ ಪರಮಹಂಸರ ಶಿಷ್ಯರು. ಸದ್ಯದಲ್ಲಿ ಅವರ ಗುರು ದಿನವಿಡೀ ಯಜ್ಞವೊಂದನ್ನು ಮಾಡುತ್ತಿದ್ದಾರೆ. ಅಷ್ಟರಲ್ಲಿ ಶ್ರೀಮಾತೆ ಬಂದು ಕುಳಿತರು. ಅವರಲ್ಲಿ ಒಬ್ಬಾಕೆ, "ನಿಮ್ಮನ್ನು ಒಂದು ಪ್ರಶ್ನೆ ಕೇಳಲು ಇಷ್ಟ ಪಡುತ್ತೇನೆ" ಎಂದಳು.

**ಶ್ರೀಮಾತೆ:** "ಕೇಳು"

**ಆಕೆ:** "ಮೂರ್ತಿಪೂಜೆಯ ಮಹತ್ವ ಏನು? ನಮ್ಮ ಗುರು, ಅದರಲ್ಲಿ ಏನೂ ಇಲ್ಲ. ಸೂರ್ಯ, ಅಗ್ನಿಯ ಪೂಜೆ ಮಾಡಿ ಎಂದು ಆದೇಶಿಸುತ್ತಾರೆ."

**ಶ್ರೀಮಾತೆ:** "ನಿನ್ನ ಗುರುವಿನ ಉಪದೇಶ ಹಾಗಿರುವಾಗ ಅದನ್ನು ನನ್ನ ಬಳಿ ಕೇಳದಿರುವುದೇ ಒಳ್ಳೆಯದು. ಗುರುವಾಕ್ಯದಲ್ಲಿ ವಿಶ್ವಾಸ ಇರಬೇಕು."

**ಆಕೆ:** "ಅದು ಹೇಗೆ ಆಗತ್ತೆ? ನಿಮ್ಮ ಅಭಿಪ್ರಾಯ ಹೇಳಲೇ ಬೇಕು."

ಶ್ರೀಮಾತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಆದರೆ ಆ ಸಂನ್ಯಾಸಿನಿ ಪಟ್ಟು ಹಿಡಿದು ಕುಳಿತಿದ್ದಾಳೆ. ವಿಧಿ ಇಲ್ಲದೆ ಶ್ರೀಮಾತೆ ಹೀಗೆ ಹೇಳಿದರು: "ಅವರು (ನಿಮ್ಮ ಗುರು) ಸರ್ವಜ್ಞನಾಗಿದ್ದರೆ ಈ ರೀತಿ ಹೇಳುತ್ತಿರಲಿಲ್ಲ. ಅಯ್ಯೋ, ನೋಡು ನಿನ್ನ ಹಠದಿಂದಾಗಿ ನನ್ನ ಬಾಯಿಂದ ಎಂತಹ ಮಾತು ಹೊರಬಂದಿತು! ಹೀಗೆಂದೂ ಆಗಿರಲಿಲ್ಲ. ಅದೆಷ್ಟು ಕಾಲದಿಂದ ಮೂರ್ತಿಪೂಜೆಯ ಸಹಾಯ ದಿಂದ ಎಷ್ಟೊಂದು ಜನ ಮುಕ್ತರಾಗಿದ್ದಾರೆ! ಹಾಗಾದರೆ ಅದೆಲ್ಲ ನಿರರ್ಥಕವೇ? ಶ್ರೀರಾಮಕೃಷ್ಣರು ಎಂದೂ ಈ ರೀತಿಯ ಸಂಕುಚಿತ ಬುದ್ಧಿಯವರಾಗಿರಲಿಲ್ಲ. ಬ್ರಹ್ಮ ಎಲ್ಲ ವಸ್ತುಗಳಲ್ಲೂ ಇದ್ದಾನೆ. ಆದರೆ ಮನುಷ್ಯನಿಗೆ ಮಾರ್ಗ ತೋರಿಸಲು ಮಹಾಪುರುಷರು ಆಗಮಿಸುತ್ತಾರೆ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ದೇಶ, ಕಾಲ ಮತ್ತು ಅಧಿಕಾರಿಗೆ ತಕ್ಕಂತೆ ಉಪದೇಶ ಕೊಡುತ್ತಾರೆ. ಮಾರ್ಗಗಳು ಅನೇಕ. ಆದ್ದರಿಂದಲೇ ಪ್ರತಿಯೊಬ್ಬರ ಉಪದೇಶವೂ ಸತ್ಯ. ಉದಾಹರಣೆಗೆ ಮರವೊಂದರಲ್ಲಿ ಅನೇಕ ಬಗೆಯ ಪಕ್ಷಿಗಳು ಕುಳಿತು ಚಿಲಿಪಿಲಿಗುಟ್ಟುತ್ತವೆ. ಬಿಳಿ, ಕರಿ, ಕೆಂಪು – ವಿವಿಧ ಬಗೆಯವು. ಬೇರೆ ಬೇರೆ ಶಬ್ದ ಕೇಳಿದರೂ, ನಾವು ಅವುಗಳಿಗೆಲ್ಲಾ ಪಕ್ಷಿಗಳ ಕಲರವ ಎಂದೇ ಹೇಳುತ್ತೇವೆ. ಅವುಗಳಲ್ಲಿ ಒಂದು ಮಾತ್ರ ಸತ್ಯ, ಉಳಿದುದೆಲ್ಲಾ ಮಿಥ್ಯ ಎಂದರೆ ಹೇಗೆ?"

ಆಕೆ ಸ್ವಲ್ಪ ತರ್ಕ ಮಾಡಿ ಸುಮ್ಮನಾದಳು. ನಂತರ ಶ್ರೀಮಾತೆ ಯವರನ್ನು ಕುರಿತು, "ನಿಮ್ಮದು ಯಾವ ಊರು?" ಎಂದು ಕೇಳಿದಳು. ಶ್ರೀಮಾತೆ "ಹೂಗ್ಲಿ ಜಿಲ್ಲೆಯ ಕಾಮಾರ್‌ಪುಕುರ" ಎಂದರು. ಆ ಸ್ತ್ರೀಯರು "ಇಲ್ಲಿಯ ವಿಳಾಸ ಕೊಡಿ. ನಾವು ಆಗಾಗ ಬರಲು ಪ್ರಯತ್ನಪಡುತ್ತೇವೆ" ಎಂದರು. ಶ್ರೀಮಾತೆ ಬರೆದುಕೊಡಲು ನನಗೆ ಹೇಳಿದರು. ಅವರ ಆದೇಶದ ಮೇರೆಗೆ, ಅವರು ತಂದಿದ್ದ ಸಿಹಿ ತಿಂಡಿಯಲ್ಲಿ ಸ್ವಲ್ಪ ಭಾಗವನ್ನು ಅವರ ಜೊತೆಗೆ ಬಂದಿದ್ದ ಬಾಲಕನಿಗೆ ಕೊಟ್ಟೆ. ಈಗ ಅವರು ಹೊರಡಲನುವಾದರು. ಅವರು ಹೊರಟುಹೋದ ಮೇಲೆ ಶ್ರೀಮಾತೆ, "ಹೆಣ್ಣು ಹೆಂಗಸು, ಅದರ ಮೇಲೆ ತರ್ಕ! ಜ್ಞಾನಿಗಳೂ ಸಹ ಬ್ರಹ್ಮನನ್ನು ತರ್ಕದಿಂದ ಪಡೆಯಲು ಅಸಾಧ್ಯ. ಬ್ರಹ್ಮ ಎಂದಾದರೂ ತರ್ಕದ ವಸ್ತುವಾಗಲು ಸಾಧ್ಯವೇ?" ಎಂದರು. ಅಷ್ಟರಲ್ಲಿ ನನ್ನ ಗಾಡಿ ಬಂದಿರುವುದನ್ನು ತಿಳಿದು, "ನೋಡಮ್ಮಾ (ಪಾಟಾಲ್‌ಡಾಂಗಾದ) ಗಾಡಿ ಬಂದಿದೆಯಂತೆ" ಎಂದರು. ಈಗ ತಾನೇ ಬಂದಿದ್ದೇನೆ. ಅಷ್ಟರಲ್ಲಿ ಹೊರಡಬೇಕೇ? ನಂತರ ಶ್ರೀಮಾತೆ ಆತುರಾತುರವಾಗಿ ಶ್ರೀರಾಮಕೃಷ್ಣರಿಗೆ ಮಧ್ಯಾಹ್ನದ ನೈವೇದ್ಯ ಕೊಟ್ಟು, ಅದರ ಸ್ವಲ್ಪ ಭಾಗ ಪ್ರಸಾದ, ತೀರ್ಥ ಮತ್ತು ಎರಡು ವೀಳ್ಯ ತಂದು, ವರಾಂಡದ ಮೂಲೆಗೆ ನನ್ನನ್ನು ಕರೆದು ಕೊಟ್ಟರು. ಶ್ರೀಮಾತೆ ದುರ್ಗಾಪೂಜೆಯ ನಂತರ ಕಾಶೀಯಾತ್ರೆ ಕೈಗೊಳ್ಳುತ್ತಾರೆ. ಮತ್ತೆ ಅವರ ದರ್ಶನ ಎಂದೋ? ಮೇಲಾಗಿ ಈ ಪ್ರೀತಿ ವಾತ್ಸಲ್ಯ!! ಹೀಗೆ ವಿವಿಧ ಭಾವನೆಗಳು ಒಟ್ಟುಗೂಡಿ ನನ್ನ ಕಣ್ಣಲ್ಲಿ ನೀರು ಬಂತು. ಅಷ್ಟರಲ್ಲಿ ಕೆಳಗಿನಿಂದ ಚಂದ್ರಬಾಬು ಬಂದು, ಸ್ವಲ್ಪ ಕೋಪದಿಂದಲೇ "ಕೆಳಗಡೆ ಗಾಡಿ ಕಾದಿದೆ. ಎಷ್ಟೋ ಬಾರಿ ಹೇಳಿದ್ದೇನೆ, ಗಾಡಿಯನ್ನು ವಿನಾಕಾರಣ ಕಾಯಿಸಬೇಡ ಎಂದು. ಗಾಡಿಯವನಂತೂ ಒಂದೇ ಸಮನೆ ಕೂಗಾಡುತ್ತಿದ್ದಾನೆ" ಎಂದು ಹೇಳಿದ. ಶ್ರೀಮಾತೆ, "ಹೌದೇನೋ, ಇಗೋ, ಈಗಲೇ ಹೊರಟಳು. ಹೋಗಿ ಬಾಮ್ಮಾ" ಎಂದರು. ಹನಿಗೂಡಿದ ಕಣ್ಣುಗಳಿಂದಲೇ ಶ್ರೀಮಾತೆಗೆ ನಮಸ್ಕರಿಸಿ ಬೇಗನೆ ಕೆಳಗಿಳಿದು ಓಡಿದೆ. ಈ ಮಧುರ ಭಾವಾವೇಗದಿಂದ ರಾತ್ರಿ ಮನೆಯಲ್ಲೂ ಸಹ ಯಾರ ಜೊತೆಗೂ ಹೆಚ್ಚು ಮಾತನಾಡಲಿಲ್ಲ. ರಾತ್ರಿಯಿಡೀ ಇದೇ ಭಾವದಲ್ಲಿದ್ದೆ.

(*ಮುಂದುವರಿಯುವುದು*)